ಡಿಸೆಂಬರಿನಲ್ಲಿ ಕೊನೆಗೆ ಮಳೆ ಬಂದಿದ್ದರಿಂದ ಫಸಲು ಕೆಡಲಿಲ್ಲವೆಂದು ತಿಳಿಸಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಜಮಾಬಂದಿಯಲ್ಲಿ, ಪಹಣಿ ಲೆಕ್ಕ, ತ್ಯಾನುಭೋಗರು ಬರೆದಿದ್ದರೆ, ಅದರ ಆಧಾರದಮೇಲೆ ಎಲ್ಲೆಲ್ಲಿ ಬೆಳೆಯಾಗಿಲ್ಲವೆಂದು ಗೊತ್ತಾಗುತ್ತದೋ ಅಲ್ಲಿಗೆ ರಿಮಿಷ್ಷ ಕೊಡುತ್ತೀರಾ ?

(No answer).

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಳೆಯಾಗಿಲ್ಲವೆಂದು ಸರ್ಕಾರಕ್ಕೆ ವರದಿ ಬಂದಿಲ್ಲವೆಂದು ಹೇಳಿದಿರಿ. ಶ್ರೀಮಾನ್ ಸೋಲೂರು ಸಿದ್ದಪ್ಪನವರ ಪ್ರಭಾವದಿಂದ ಇನ್ನೊಂದು ವರದಿ 'ಆಗಿಲ್ಲ'ವೆಂದು ಬಂದರೆ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದವರು ಯಾರ ಪ್ರಭಾವದಿಂದಲೂ ವರದಿ ಕಳುಹಿಸುವುದಿಲ್ಲವೆಂದು ತಿಳಿಸುತ್ತೇನೆ.

QUESTIONS FOR ANSWERS ON THE DAY

(but not taken up).

Depressed Classes (Representtiaon in Amildari List).

Q.—94. **Sri H. K. SIDDAIYA** (Belur—Scheduled Castes).—

Will the Government be pleased to state :—

whether 16 2/3rds per cent reservation is given to Depressed Classes in the Amildari list that is now before Government ?

A.—**Sri Kadidal MANJAPPA** (Minister for Revenue and Public Works).—

Yes.

Housing Scheme in Bellary District.

Q.—366. **Sri Ijari SIRASAPPA** (Harapanahalli).—

Will the Government be pleased to state :—

(*a*) whether colonisation scheme of Madras Government (Co-operative Housing Schemes) in Bellary District will be continued and implemented ;

(*b*) whether it is a fact that House Building Societies in Bellary are becoming defunct for want of sanction of loans ;

(*c*) the reason for the delay in granting loans and remedy that is proposed by the Government ?

A.—**Dr. R. NAGAN GOWDA** (Minister for Agriculture).—

(*a*) Loans are being given to House Building Co-operative Societies for implementing the scheme.

(*b*) No.

(*c*) There is no delay in sanctioning loans.

Land Revenue (Remission in Kolar District).

Q.—574. **Sri M. C. ANJANEYA REDDY** (Chintamani).—

Will the Government be pleased to state :—

(*a*) whether they intend to grant remission to the ryots in Kolar District since the yield of both wet and dry crops has gone down below eight annas for want of rains ;

(*b*) whether they have received the pahani reports from Chintamani taluk ;

(*c*) whether any steps have been taken in this behalf for granting remission of land revenue to Chintamani taluk ?

A.—**Sri Kadidal MANJAPPA** (Minister for Revenue and Public Works).—

(*a*) The question of granting remission of Land Revenue wherever crops failed is under enquiry.

(*b*) No.

(*c*) Does not arise, in view of the reply to clause (*a*) above.

9-30 A.M.

ಶ್ರೀ ವಿ. ಆರ್. ನಾಯ್ಡು.—ಸ್ವಾಮಿ, ನಾನು ಈಗ ಒಂದು ಬಹಳ ಪ್ರಾಮುಖ್ಯವಾದ ವಿಚಾರವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ. ಮಾನ್ಯ ಸಭಾ ನಾಯಕರು ಈ ವಿಚಾರಕ್ಕೆ ಮುಖ್ಯ ಗಮನ ಕೊಡಬೇಕು. It is a very important information. ಈಗ ನಮ್ಮ ಸಭೆಯಲ್ಲಿ ಒಂದು ಮಹತ್ತರವಾದಂಥ ಸನ್ನಿವೇಶ ಉಂಟಾಗಿದೆ. ಆದುದರಿಂದ ಮಾನ್ಯ ಸಭಾಧ್ಯಕ್ಷರೂ ಮತ್ತು ಸಭಾ ನಾಯಕರೂ ಈ ವಿಚಾರಕ್ಕೆ ತುಂಬ ನಿಗಾ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಲ್ಲಿಗೆ ಸುಮಾರು 20-23 ವರ್ಷಗಳಿಂದಲೂ ಈ ಸಭೆಗೆ ಸದಸ್ಯರಾಗಿ ಬರುತ್ತಿರುವ ಮತ್ತು ತುಂಬ ಅನುಭವಿಗಳಾಗಿರತಕ್ಕಂಥ ಶ್ರೀಮಾನ್ ಭೀಮಪ್ಪನಾಯಕರ ವಿಚಾರದಲ್ಲಿ ಒಂದು ಮುಖ್ಯವಾದ ಅಂತಂಶವನ್ನು ಈ ಸಭೆಯ ಗಮನಕ್ಕೆ ತರಲು ನಾನೀಗ ಇಷ್ಟಪಟ್ಟಿದ್ದೇನೆ.